


ಚಿತ್ರದುರ್ಗದಲ್ಲಿ ನಾಯಿಗಳ ಹಾಸ್ಟೆಲ್ ನಡೆಸುತ್ತಿರುವ ವಿದ್ಯಾಸಾಗರ್



ವಂಚಿತರಾಗಿರುವವರ ಸಂಖ್ಯೆ ಕಡಿಮೆಯೇನಿಲ್ಲ.

## ತಾತ್ಕಾಲಿಕ ತಂಗುದಾಣ

ಮನೆಯಿಂದ ಹೊರಗೆ ಹೋಗುವುದು ಅನಿವಾರ್ಯವಾದಾಗ ನಮ್ಮ ಪ್ರೀತಿಯ ನಾಯಿಯನ್ನು ನೋಡಿಕೊಳ್ಳುವವರು ಯಾರು? ಈ ಪ್ರಶ್ನೆಗೆ ಉತ್ತರದ ರೂಪದಲ್ಲಿ, ನಗರಪ್ರದೇಶಗಳಲ್ಲಿ ಸಾಕುನಾಯಿಗಳಿಗಾಗಿ ತಾತ್ಕಾಲಿಕ ಅತಿಥಿಗೃಹಗಳು ಶುರುವಾಗಿವೆ. 'ಡಾಗ್ಸ್ ಹಾಸ್ಟೆಲ್', 'ಕೆನಲ್ ಕೇರಿಂಗ್ ಸೆಂಟರ್', 'ಪೆಟ್ ಬೋರ್ಡಿಂಗ್', 'ಪೆಟ್ ಹೋಮ್‌ಸ್ಟೇ', 'ಡಾಗ್ ಗ್ರೂಮಿಂಗ್' – ಹೀಗೆ ಬೇರೆ ಬೇರೆ ಹೆಸರುಗಳಿಂದ ಗುರ್ತಿಸಿಕೊಳ್ಳುವ ಈ ಕೇಂದ್ರಗಳು ನಾಯಿಯ ಆರೈಕೆಯನ್ನು ನೋಡಿಕೊಳ್ಳುತ್ತವೆ. ಈ ಕೇಂದ್ರಗಳು, ನಾಯಿ ಸಾಕುವವರಿಗೆ ಊರಿಗೆ ಹೋಗಬೇಕಾದ ಸಂದರ್ಭದಲ್ಲಿನ ಚಿಂತೆಯನ್ನು ದೂರಮಾಡುತ್ತಿವೆ. ನಮಗೆ ಕೆಲಸವಿರುವಷ್ಟು ದಿನ ನಾಯಿಗಳನ್ನು ಈ ಕೇಂದ್ರಗಳಲ್ಲಿ ಬಿಟ್ಟು, ನಮ್ಮ ಕೆಲಸ ಮುಗಿದ ನಂತರ ನಂತರ ವಾಪಸ್ ಮನೆಗೆ ಕರೆದೊಯ್ಯಬಹುದು.

ಮಾಲೀಕರು ಊರಿನಿಂದ ಹೊರಹೋಗಬೇಕಾದಾಗ ಬೋರ್ಡಿಂಗ್ ಸೆಂಟರ್‌ನಲ್ಲಿ ನಾಯಿಗಳನ್ನು ನಿಶ್ಚಿಂತೆಯಿಂದ ಬಿಟ್ಟುಹೋಗಬಹುದು. ಬರೀ ಹೊರ ಹೋಗುವ ಸಂದರ್ಭ ಮಾತ್ರವಲ್ಲ – ಮನೆಮಂದಿಗೆ ಅನಾರೋಗ್ಯವಾದಾಗ, ಆಸ್ಪತ್ರೆಗೆ ದಾಖಲಾಗಬೇಕಾದ ಸಂದರ್ಭದಲ್ಲಿ, ಸಮಾರಂಭದಲ್ಲಿ ಭಾಗವಹಿಸಲು ಬೇರೆ ಊರಿಗೆ ಹೋಗಬೇಕಾದ ಸಂದರ್ಭದಲ್ಲಿ, ಮನೆಯಲ್ಲಿ ಒಬ್ಬರೇ ಇದ್ದು, ಕಚೇರಿಗೆ ಹೋಗಬೇಕಾದ ವೇಳೆಯಲ್ಲಿ – ಇಂಥ ಸಂದರ್ಭಗಳಲ್ಲೆಲ್ಲ ನಾಯಿಯನ್ನು ನೋಡಿಕೊಳ್ಳುವುದು ಕಷ್ಟವಾಗುತ್ತದೆ. ಹಾಗೆಲ್ಲ, ಶುಲ್ಕವನ್ನು ಪಡೆದು

### ತಳಿಗಳು ಮತ್ತು ವ್ಯಾಕ್ಸೀನ್ ವಿವರಗಳು

ಜಗತ್ತಿನಲ್ಲಿ 400ಕ್ಕೂ ಹೆಚ್ಚು ನಾಯಿಯ ತಳಿಗಳಿವೆ. ಅದರಲ್ಲಿ ಮುಖ್ಯವಾಗಿ ಆಟದ ತಳಿಗಳೂ, ಆಟವಾಡದ ತಳಿಗಳು ಎಂದು ಎರಡು ವಿಧ, ಲ್ಯಾಬ್ರಡಾರ್, ಸ್ಪ್ಯಾನಿಯಲ್, ಗ್ರೇಹೌಂಡ್, ಬ್ಲಡ್‌ಹೌಂಡ್, ಬೀಗಲ್, ಟೆರಿಯರ್ ಮುಂತಾದವು ಮುಖ್ಯವಾದ ಆಟದ ತಳಿಗಳು. ಗೊಂಬೆಗಳಂತಿರುವ ಪೊಮೇರಿಯನ್, ಪಗ್, ಪಿಕಿಂಗೀಸ್, ಸಿಲ್ಕಿ ಟೆರಿಯಲ್ ಇದೇ ಗುಂಪಿನಲ್ಲಿ ಸೇರುತ್ತವೆ. ಆಟವಾಡದ ತಳಿಗಳಲ್ಲಿ ಬುಲ್‌ಡಾಗ್, ಡಾಲ್ಮೇಷಿಯನ್, ಚೌಚೌ, ಜರ್ಮನ್ ಶೆಫರ್ಡ್, ಬಾಕ್ಸರ್, ಮ್ಯಾಸ್ಟಿಫ್, ಡಾಬರ್‌ಮನ್ ಮುಂತಾದವುಗಳಿವೆ.

### ಯಾವುದೆಲ್ಲ ವ್ಯಾಕ್ಸೀನ್?

- 6ರಿಂದ 8 ವಾರದ ಮರಿಗೆ ಡಿಸ್ಟೆಂಪರ್ ಹಾಗೂ ಪಾರ್ವೋ ವೈರಸ್ ವ್ಯಾಕ್ಸೀನ್ ಕೊಡಿಸಬೇಕು. ಕೆನೈನ್ ಡಿಸ್ಟೆಂಪರ್ ನರಮಂಡಲಕ್ಕೆ ತಗಲುವ ಸೋಂಕು. ಇದು ನಾಯಿಯಿಂದ ನಾಯಿಗೆ ಹರಡುತ್ತದೆ. ಪಾರ್ವೋ ಸಹ ಜೀವ ತೆಗೆಯುವ ಸೋಂಕಾಗಿದೆ ಹೀಗಾಗಿಯೇ ಈ ಲಸಿಕೆ ನಾಯಿಗಳಿಗೆ ಕೊಡಿಸಲೇ ಬೇಕು.
- 10–12ನೇ ವಾರದಲ್ಲಿ ಡಿಎಚ್ಪಿಪಿ (ಡಿಸ್ಟೆಂಪರ್, ಹೆಪಟೈಟಿಸ್, ಪ್ಯಾರಾ ಇನ್ಸ್‌ಫ್ಲುಯೆಂಜಾ ಹಾಗೂ ಪಾರ್ವೋ ವೈರಸ್)
- 12–16ನೇ ತಿಂಗಳಿನಲ್ಲಿ ಡಿಎಚ್ಪಿಪಿ, ರೇಬಿಸ್ ಹಾಗೂ ಕೊರೊನಾ ವ್ಯಾಕ್ಸೀನ್
- 16–18ನೇ ವಾರದಲ್ಲಿ ಡಿಎಚ್ಪಿಪಿ ಹಾಗೂ ರೇಬಿಸ್ವ್ಯಾಕ್ಸೀನ್
- ಒಂದು ವರ್ಷವಾದಾಗ ಡಿಎಚ್ಪಿಪಿ, ರೇಬಿಸ್ (ಪ್ರತಿ ವರ್ಷ ಕೊಡಿಸಲೇಬೇಕು).